● ಸಂಪುಟ 7

● ಸಂಚಿಕೆ 8

ಆಗಸ್ಟ್ 2010

# ಸ್ವಾಭಿಮಾನಿ ಸಹಕಾರಿ

ಕರ್ನಾಟಕ ರಾಜ್ಯ
ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ರೂ. 5

ವಾರ್ಷಿಕ ಚಂದಾ ರೂ 50/–

## 9 ನೇ ಸಾಮಾನ್ಯ ಸಭೆ :

# ಅರ್ಥಪೂರ್ಣ ಚರ್ಚೆ ಅಭಿವೃದ್ಧಿಗೆ ಪೂರಕ ಸಲಹೆಗಳು




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 9ನೇ ಸಾಮಾನ್ಯ ಸಭೆಯು ದಿನಾಂಕ 5–8–2010ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್. ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರದ ಸರ್.ಪುಟ್ಟಣ್ಣಚೆಟ್ಟಿ ಟೌನ್‌ಹಾಲ್‌ನಲ್ಲಿ ನಡೆಯಿತು. ಪ್ರಾರಂಭದಲ್ಲಿ ಕುಮಾರಿ ವಿದ್ಯಾಭಟ್ ಅವರಿಂದ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರಿಂದ ಸ್ವಾಗತವಾಯಿತು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ಪ್ರಾಸ್ತಾವಿಕವಾಗಿ ಮಾತನಾಡಿ 2009–10 ನೇ ಸಾಲು ಸೌಹಾರ್ದ ಸಹಕಾರಿಗಳ ಪಾಲಿಗೆ ಅತ್ಯಂತ ಮಹತ್ವದ ವಿಷಯಗಳನ್ನೊಳಗೊಂಡ ವರ್ಷವಾಗಿದೆ. ಪ್ರಸಕ್ತ ಸಾಲಿನಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಪೂರಕವಾಗುವ ಅನೇಕ ಕಾರ್ಯಚಟುವಟಿಕೆಗಳು ನಡೆದಿವೆ. ವಿಶೇಷವಾಗಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾವಿಯಲ್ಲಿ ಸೌಹಾರ್ದ ಸಹಕಾರಿಗಳ ಬೃಹತ ಸಮಾವೇಶವನ್ನು ದಶಮಾನೋತ್ಸವ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಮೆಚ್ಚಿಕೊಂಡಿದ್ದಾರೆ. ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಎಮ್.ಉದಾಸಿಯವರು ಬೆಳಗಾವಿಯಲ್ಲಿ ವಿಭಾಗದ ಕಚೇರಿಯನ್ನು ಉದ್ಘಾಟಿಸಿದ್ದಾರೆ. ಈ ಎರಡು ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯವರು ವಹಿಸಿ ಸೌಹಾರ್ದ ಸಹಕಾರಿಗಳು

6ನೇ ಪುಟಕ್ಕೆ...

## ಪರಿಣಾಮಕಾರಿ ಸಭೆಗಳು – ಹಾಜರಾತಿ ಸಂಖ್ಯೆ ಹೆಚ್ಚಳ ಅಗತ್ಯ

ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು ನಾವೀಗ 10 ನೇ ವರ್ಷದಲ್ಲಿದ್ದೇವೆ. ದಶಮಾನೋತ್ಸವ ಆಚರಣೆಯನ್ನು ಮಾಡುತ್ತಿದ್ದೇವೆ ರಾಜ್ಯದ ಸಹಕಾರಿಗಳಿಗೆ ಉತ್ತಮ ಸೇವೆ ಸಲ್ಲಿಸುತ್ತ ಸಾರ್ವಜನಿಕರ ಹಾಗೂ ಸರಕಾರದ ಗಮನ ಸೆಳೆದಿದ್ದೇವೆ. ಈ ತಿಂಗಳು ಹಾಗೂ ಮುಂದಿನ ತಿಂಗಳುಗಳಲ್ಲಿ ನಮ್ಮೆಲ್ಲ ಸಹಕಾರಿಗಳ ಸಾಮಾನ್ಯ ಸಭೆಗಳು ನಡೆಯಲಿವೆ. ನಮ್ಮ ಸಂಖ್ಯೆ 1420 ತಲುಪಿದೆ.ಇಂತಹ ಸಂದರ್ಭದಲ್ಲಿ ನಮ್ಮ ಕೆಲಸಕಾರ್ಯಗಳ ಪ್ರಗತಿ ನಮ್ಮ ಸಾಧನೆಗಳ ಸಿಂಹಾವಲೋಕನ ಮುಂಬರುವ ದಿನಗಳಲ್ಲಿ ನಾವು ಹಾಕಿಕೊಳ್ಳಬಹುದಾದ ಕಾರ್ಯಕ್ರಮಗಳು ಇತ್ಯಾದಿಗಳನ್ನು ಚರ್ಚಿಸುವುದಕ್ಕಾಗಿ ರಾಜ್ಯದಾದ್ಯಂತ ಸಂಯುಕ್ತ ಸಹಕಾರಿಯು ಜಿಲ್ಲಾವಾರು ಅವಲೋಕನಾ ಸಭೆಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ. ಅದರಂತೆ ಕ್ರಮವಿಡಲಾಗುತ್ತಿದೆ.

ದಿನಾಂಕ 12–7–2010 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಶಿವಮೊಗ್ಗದಲ್ಲಿ ಹಾಗೂ ದಿನಾಂಕ 25–7–2010 ರಂದು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿಗಳಿಗಾಗಿ ಪುತ್ತೂರಿನಲ್ಲಿ ಅವಲೋಕನಾ ಸಭೆಗಳನ್ನು ಏರ್ಪಡಿಸಲಾಗಿತ್ತು ಈ ಎರಡೂ ಸಭೆಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಕುರಿತು ಅನೇಕ ವಿಷಯಗಳ ಬಗ್ಗೆ

### ಅಧ್ಯಕ್ಷರ ನುಡಿ



ಅರ್ಥಪೂರ್ಣ ಚರ್ಚೆನಡೆದುದು ಗಮನಾರ್ಹ. ಭಾಗವಹಿಸಿದ ಸಹ ಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ತಮ್ಮ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಹೀಗೆ ಮಾಡುವಾಗ ಭಾಗವಹಿಸಿದ ಸಹಕಾರಿಗಳಿಗೆ ತಾವು ಮಾಡುತ್ತಿರುವ ಚಟುವಟಿಕೆಗಳ ಹಾಗೂ ಇತರರು ಮಾಡುತ್ತಿರುವ ಚಟುವಟಿಕೆಗಳ ಬಗ್ಗೆ ತುಲನಾತ್ಮಕ ಅಧ್ಯಯನಮಾಡಲು ತಾವೂ ಸಹ ತಮ್ಮ ಸಹಕಾರಿಯಲ್ಲಿ ಅಳವಡಿಸ ಬಹುದಾದ ವಿಷಯಗಳ ಬಗ್ಗೆ ಆಲೋಚನೆ ಮಾಡಲು ಅವಕಾಶವಾಗಿದೆ ಎಂದು ಅಭಿಪ್ರಾಯವಾಯಿತು.

ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆಯನ್ನು ನಮ್ಮೆಲ್ಲ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಸಹಕಾರಿಗಳು,ಸಾರ್ವಜನಿಕರು ಹಾಗೂ ರಾಜ್ಯ ಸರಕಾರ ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ತಿಳಿಯಬೇಕು. ನಾವು ಎಲ್ಲಿ ಎಡವಬಹುದು ಎಲ್ಲಿ ತಪ್ಪು ಮಾಡಬಹುದು ಎಂಬುದನ್ನು ಪ್ರತಿ ಹಂತದಲ್ಲೂ ಗಮನಿಸುತ್ತಿದ್ದಾರೆ. ಆದ್ದರಿಂದ ನಾವುಗಳು ಜಾಗೃತರಾಗಿರುವುದು ಅತ್ಯಂತ ಅವಶ್ಯಕ.ಆದ್ದರಿಂದ ಇಂತಹ ಸಭೆಗಳಲ್ಲಿ ನಿಮ್ಮ ಭಾಗವಹಿಸುವಿಕೆ ನಿಮ್ಮ ಪ್ರಗತಿಗೆ ತಿರುವುಕೊಡಬಲ್ಲದ್ದಾಗಬಹುದು. ಆದ್ದರಿಂದ ಯಾವುದೆ ಕಾರಣಕ್ಕೂ ಇಂತಹ ಸಭೆಗಳಲ್ಲಿ ಗೈರು ಹಾಜರಾಗುವಿಕೆ

2ನೇ ಪುಟಕ್ಕೆ...

ಅಧ್ಯಕ್ಷರ ನುಡಿ......................

# ಪರಿಣಾಮಕಾರಿ ಸಭೆಗಳು – ಹಾಜರಾತಿ ಸಂಖ್ಯೆ ಹೆಚ್ಚಳ ಅಗತ್ಯ

...1ನೇ ಪುಟದಿಂದ

ಸಲ್ಲದು. ಅದು ನಿಮ್ಮ ನಿರಾಸಕ್ತಿಯನ್ನು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ನಿಮ್ಮ ಅಸಹಕಾರವನ್ನು ತೋರಿಸಿದಂತಾಗುತ್ತದೆ. ಶಿವಮೊಗ್ಗದಲ್ಲಿ 33 ಸೌಹಾರ್ದ ಸಹಕಾರಿಗಳ ಪೈಕಿ 17 ಸೌಹಾರ್ದ ಸಹಕಾರಿಗಳ ಭಾಗವಹಿಸುವಿಕೆ ನಿರಾಶಾದಾಯಕವಲ್ಲದಿದ್ದರೂ ಪ್ರೋತ್ಸಾಹ ದಾಯಕವಂತೂ ಆಗುವುದಿಲ್ಲ. ಆದರೆ ದಕ್ಷಿಣ ಕನ್ನಡದಲ್ಲಿ 22 ಸೌಹಾರ್ದ ಸಹಕಾರಿಗಳ ಪೈಕಿ 17 ಸೌಹಾರ್ದ ಸಹಕಾರಿಗಳು ಭಾಗವಹಿಸಿರುವುದು ಆಶಾದಾಯಕವೆನಿಸಬಹುದು. ಈ ಹಾಜರಾತಿ ಪ್ರಮಾಣ ನೂರಕ್ಕೆ ನೂರು ಆದಾಗಮಾತ್ರ ಈ ಕ್ಷೇತ್ರದ ಸಹಕಾರಿಗಳು ಉತ್ಸಾಹಶಾಲಿಗಳು, ಅಭಿವೃದ್ಧಿಪರರು, ಕ್ರಿಯಾಶೀಲರು ಎಂದು ಅಭಿಮಾನಪೂರ್ವಕವಾಗಿ ಹೇಳಲು ಸಾಧ್ಯವಾಗುತ್ತದೆ. ಅಂತಹ ಸ್ವಭಾವವನ್ನು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ತಾವು ಬದ್ಧತೆಯನ್ನು ಬೆಳೆಸಿಕೊಳ್ಳುತ್ತೀರೆಂದು ಆಶಿಸುತ್ತೇನೆ. ತಮ್ಮ ನಡೆ ನುಡಿ ಇತರರಿಗೆ ಮಾರ್ಗದರ್ಶನವಾಗುತ್ತದೆಂದು ನಂಬಿದ್ದೇನೆ.

ಮಾನ್ಯ ಸಹಕಾರಿ ಬಂಧುಗಳೇ,ಇದೇ ಸಂದರ್ಭದಲ್ಲಿ ಇನ್ನೂಂದು ಅತ್ಯಂತ ಮಹತ್ವದ ವಿಷಯ.ಅದು ಈಗ ನಡೆಯುತ್ತಿರುವ ಸಾಮಾನ್ಯ ಸಭೆಗಳು. ಈ ಸಾಮಾನ್ಯ ಸಭೆಗಳಲ್ಲಿ ಮಾತ್ರ ಸಹಕಾರಿಯ ಎಲ್ಲ ಸದಸ್ಯರಿಗೆ ತಮ್ಮ ಅನಿಸಿಕೆ ಅಹವಾಲುಗಳನ್ನು ತಿಳಿಸುವ ಸದವಕಾಶವಿರುವುದರಿಂದ ಸಾಧ್ಯವಾದಷ್ಟು ಸದಸ್ಯರು ಈ ಸಭೆಗಳಲ್ಲಿ ಭಾಗವಹಿಸುವ ಹಾಗೆ ಏನಾದರೂಂದು ವಿಶೇಷ ಆಕರ್ಷಣೆಯನ್ನು ವ್ಯವಸ್ಥೆಮಾಡಿ ಅವರೆಲ್ಲ ಭಾಗವಹಿಸುವ ಹಾಗೆ ಮಾಡುವುದು ಸಹಕಾರಿಯ, ಅಧ್ಯಕ್ಷರುಗಳ, ಪಧಾಧಿಕಾರಿಗಳ ನಿರ್ದೇಶಕರ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಎಲ್ಲ ಸಿಬ್ಬಂದಿಯವರ ಕರ್ತವ್ಯವಾಗಿದೆ. ಕೇವಲ ಕಾಟಾಚಾರಕ್ಕಾಗಿ ಸಾಮಾನ್ಯ ಸಭೆ ಜರುಗಿಸಿದರೆ ಯಾರಿಗೂ ಯಾವುದೆ ರೀತಿಯ ಪ್ರಯೋಜನವಾಗುವುದಿಲ್ಲ. ಈ ಸಭೆಗಳು ಒಂದು ಮಾದರಿ ಸಭೆಯಾಗಿ ಹೊರಹೊಮ್ಮಬೇಕು. ಸದಸ್ಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಬೇಕು. ಸಹಕಾರಿಯು ಒಂದು ಉತ್ತಮ ಆರ್ಥಿಕ ಸಂಘಟನೆಯಾಗಿ ಕಾರ್ಯನಿರ್ವಹಿಸವಂತಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಆಶೆಯಾಗಿದೆ. ತಾವು ಅದರಂತೆ ನಡೆಸಿಕೊಡಲು ಪ್ರಯತ್ನಿಸುತ್ತೀರೆಂದು ಆಶಿಸುತ್ತೇನೆ.

– ಎಸ್. ಆರ್. ಸತೀಶಚಂದ್ರ

## ಸಂಯುಕ್ತ ಸಹಕಾರಿಯ ಜುಲೈ ತಿಂಗಳ ತರಬೇತಿ ಹಾಗೂ ಅವಲೋಕನಾ ಸಭೆಗಳು

## ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ – ಆರ್.ಎಮ್. ಮಂಜುನಾಥಗೌಡ

ಶಿವಮೊಗ್ಗ 12 ಜುಲೈ 2010 ಸಂಯುಕ್ತ ಸಹಕಾರಿಯ ನೇತ್ರತ್ವದಲ್ಲಿ ಜುಲೈ 2010ರಲ್ಲಿ ಶಿವಮೊಗ್ಗ ಹಾಗೂ ಪುತ್ತೂರಿನಲ್ಲಿ ಹೀಗೆ ಎರಡು ಜಿಲ್ಲಾ ಮಟ್ಟದ ಅವಲೋಕನಾ ಸಭೆಗಳು ನಡೆದವು.

ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಯನ್ನು ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಆವರಣದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ ಚಂದ್ರರವರು ವಹಿಸಿದ್ದರು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಶ್ರೀ ಆರ್.ಎಮ್. ಮಂಜುನಾಥಗೌಡರವರು ಉದ್ಘಾಟಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಕಾರ್ಯದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುವುದಕ್ಕೆ ಇಂತಹ ಅವಲೋಕನಾ ಸಭೆಗಳಿಂದ ಪ್ರಯೋಜನವಾಗುತ್ತದೆ ಎಂದು ತಿಳಿಸಿದರು



ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ್ ಜ್ಯಾಂತಿಕರ, ಜಿಲ್ಲಾ ನಿರ್ದೇಶಕ ಶ್ರೀ ಯು. ಹೆಚ್.ರಾಮಪ್ಪ ಚಿಕ್ಕಮಗಳೂರು ಜಿಲ್ಲೆಯ ನಿರ್ದೇಶಕ ಶ್ರೀ ಎಸ್. ಎನ್.ವಿಶ್ವನಾಥ ರವರು ಉಪಸ್ಥಿತರಿದ್ದು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರಗತಿ ಹಾಗೂ ಕಾರ್ಯಚಟುವಟಿಕೆಗಳನ್ನು ಅವಲೋಕನೆ ಮಾಡಿದರು.

## ಸಹಕಾರಿ ಕ್ಷೇತ್ರದ ಮೂಲಕ ಶ್ರೀಸಾಮಾನ್ಯರಿಗೆ ಸೇವೆ ಮಾಡುವ ಉತ್ತಮ ಅವಕಾಶಗಳಿವೆ - ಶ್ರೀಮತಿ ಮಲ್ಲಿಕಾ ಪ್ರಸಾದ್



ಪುತ್ತೂರು: 25 ಜುಲೈ 2010 ಪುತ್ತೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ, ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆಯ ಕಾರ್ಯಾಗಾರವನ್ನು ಪುತ್ತೂರಿನ ಶಾಸಕಿ ಶ್ರೀಮತಿ ಮಲ್ಲಿಕಾ ಪ್ರಸಾದರವರು ಉದ್ಘಾಟಿಸಿ ಸಹಕಾರಿ ಕ್ಷೇತ್ರದ ಮೂಲಕ ಶ್ರೀ ಸಾಮಾನ್ಯರಿಗೆ ಸೇವೆ ಮಾಡುವ ಉತ್ತಮ ಅವಕಾಶಗಳಿವೆ. ಈ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವಿದೆ. ಸಹಕಾರಿ ಸಂಸ್ಥೆಗಳನ್ನು ಬಲವಾಗಿ ಕಟ್ಟಿಬೆಳೆಸಲು ಈ ರೀತಿಯ ಗುಣಮಟ್ಟ ನಿರ್ವಹಣೆಯ ತರಬೇತಿ ಹಾಗೂ ಕಾಲಕಾಲಕ್ಕೆ ಅವಲೋಕನಾ ಸಭೆಗಳನ್ನು ನಡೆಸಿ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲೆಯ ಅನೇಕ ಸೌಹಾರ್ದ ಸಹಕಾರಿಗಳು ಗಣ್ಯ ಸಹಕಾರಿಗಳು ಭಾಗವಹಿಸಿದ್ದರು. ಜಂಟಿ ನಿಬಂಧಕ ಹಾಗೂ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಬಿ.ಎ.ಮಹದೇವಪ್ಪನವರು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಆಂತರಿಕ ಸಂಬಂಧಗಳ ನಿರ್ವಹಣೆಯ ಬಗ್ಗೆ ಉಪನ್ಯಾಸ ನೀಡಿದರು.

# ವಿವಿಧ ಸೌಹಾರ್ದ ಸಹಕಾರಿಯಲ್ಲಿ ಇ–ಸ್ಟಾಂಪಿಂಗ ಸೇವೆ ಆರಂಭ



## ಜನಹಿತ ಸೌಹಾರ್ದ ಸಹಕಾರಿ, ಉಡುಪಿ

ಉಡುಪಿಯ ಜನಹಿತ ಸೌಹಾರ್ದ ಸಹಕಾರಿಯಲ್ಲಿ ಇ–ಸ್ಟಾಪಿಂಗ್ ಉದ್ಘಾಟನೆಯನ್ನು ಉಡುಪಿಯ ಶಾಸಕ ಶ್ರೀ ಕೆ.ರಘುಪತಿ ಭಟ್,
ನಗರ ಸಭೆ ಅಧ್ಯಕ್ಷ ಶ್ರೀ ದಿನಕರ ಶೆಟ್ಟಿ,
ಪೌರಾಯುಕ್ತ ಶ್ರೀ ಗೋಕುಲದಾಸ ನಾಯಕ್,
ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಗೋಪಿಕೃಷ್ಣರಾವ,
ಉಪನಿಬಂಧಕಿ ಶ್ರೀಮತಿ ಕೆ.ನಯನ,
ಸಹಕಾರಿಯ ಅಧ್ಯಕ್ಷ ಶ್ರೀ ವೈ.ಎಸ್.ಮಡಿವಾಳ
ಮುಂತಾದವರಿದ್ದಾರೆ.

## ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರ ನಿಯಮಿತ – ಸೇಡಂ

ದಿನಾಂಕ 28–06–2010ರಂದು ಇ–ಸ್ಟಾಪಿಂಗ್ ಸೇವೆಯ ಪ್ರಾರಂಭೋತ್ಸವ.
ಸಾನಿಧ್ಯ – ಪೂಜ್ಯ ಶ್ರೀ ಸದಾಶಿವ ಸ್ವಾಮಿಗಳು, ಕೊತ್ತಲ ಬಸವೇಶ್ವರ ದೇವಾಲಯ – ಸೇಡಂ.
ಮುಖ್ಯ ಅತಿಥಿಗಳು – ಸನ್ಮಾನ್ಯ ಶ್ರೀ ಅಬ್ದುಲ್ ಹಕ್ – ಉಪನೊಂದಣಾಧಿಕಾರಿಗಳು – ಸೇಡಂ.
ಅಧ್ಯಕ್ಷತೆ : ಶ್ರೀ ಸುದರ್ಶನರೆಡ್ಡಿ ಪಾಟೀಲ, ಅಧ್ಯಕ್ಷರು ಸಹಕಾರಿಯ ಹೇ.ಮ.ಸೌ.ಸ.ಸ., ಉಪಸ್ಥಿತರಿರುವವರು :
ಎಸ್. ಎಸ್. ಪಾಕಾಲ್ ಉಪಾಧ್ಯಕ್ಷರು, ಹೇ.ಮ.ಸೌ.ಪ.ಸ.ನಿ.,
ಶ್ರೀ ಶಿಲ್ಪರೆಡ್ಡಿ, ಕಾರ್ಯದರ್ಶಿಗಳು – ಹೇ.ಮ.ಸೌ.ಪ.ಸ.ನಿ.,
ಶಿವಕುಮಾರ ಗುಂಡಿಮ್ – ಸಿಬ್ಬಂದಿ, ಹೇ.ಮ.ಸೌ.ಪ.ಸ.ನಿ.,






## ನಂದಿ ಸೌಹಾರ್ದ ಪತ್ತಿನ ಸಹಕಾರಿ, ಚನ್ನಗಿರಿ.

ಚನ್ನಗಿರಿ ನಂದಿ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ಉದ್ಘಾಟಿಸಲಾಯಿತು.




## ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ, ತುಮಕೂರು.

ತುಮಕೂರು ಮರ್ಚೆಂಟ್ಸ ಸೌಹಾರ್ದ ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ಉದ್ಘಾಟನೆಯನ್ನು ಜಿಲ್ಲೆಯ ಸಂಸದ ಶ್ರೀ ಜಿ.ಎಸ್.ಬಸವರಾಜರವರು ಉದ್ಘಾಟಿಸಿದರು. ಚಿತ್ರದಲ್ಲಿ ಸಹಕಾರಿಯ ಅಧ್ಯಕ್ಷ ಶ್ರೀ ಎನ್.ಎಸ್.ಜಯಕುಮಾರ ನಿರ್ದೇಶಕ ಶ್ರೀ ಉಮಾಶಂಕರ ಶ್ರೀ ಕೆ.ಬಿ.ಜಯಣ್ಣ ಮುಂತಾದವರಿದ್ದಾರೆ.

## ದಕ್ಷಿಣ ಕನ್ನಡ ಜಿಲ್ಲೆಯ ಸರಸ್ವತಿ ಸೌಹಾರ್ದ ಸಹಕಾರಿ

# ಮಾದರಿ ಸಹಕಾರಿಯಾಗಿ ಬೆಳೆಯುವ ಎಲ್ಲ ಅವಕಾಶಗಳನ್ನು ಹೊಂದಿದೆ

**ದಕ್ಷಿಣ ಕನ್ನಡ ಜಿಲ್ಲೆಯು ಎಲ್ಲ ರಂಗದಲ್ಲೂ ಮುಂಚೋಣೆಯಲ್ಲಿರುವ ಜಿಲ್ಲೆಯಾಗಿದೆ. ಈ ಜಿಲ್ಲೆಯ ಜನ ಸುಸಂಸ್ಕೃತರು. ತಮ್ಮ ಆರ್ಥಿಕ ಅಭಿವೃದ್ಧಿ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಸದಾ ಚಿಂತನೆ ಮಾಡುವ ಸ್ವಭಾವ ಮೈಗೊಡಿಸಿಕೊಂಡವರು ಕ್ರೀಯಾಶೀಲರು ಹೀಗಾಗಿ ಇಲ್ಲಿ ಯಾವುದೆ ಸಂಸ್ಥೆಯನ್ನು ಹುಟ್ಟುಹಾಕುವಾಗ ಒಂದು ಒಳ್ಳೆಯ ಉದ್ದೇಶವನ್ನು ಹೊಂದಿ ಅದನ್ನು ಕಾರ್ಯಗತಮಾಡುವ ಪ್ರಯತ್ನ ಶೀಲರು.**

ದಕ್ಷಿಣ ಕನ್ನಡ ಜಿಲ್ಲೆಯ ಸರಸ್ವತಿ ಸೌಹಾರ್ದ ಸಹಕಾರಿಯ ಕೆಂದ್ರ ಕಛೇರಿಯ ನವೀಕೃತ ಕಟ್ಟಡದ ಉದ್ಘಾಟನೆಯನ್ನು ಹಿರಿಯ ಸಹಕಾರಿ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರೂ ಈ ರಾಜ್ಯದ ಅತ್ಯಂತ ದೊಡ್ಡ ಕ್ರೆಡಿಟ್ ಸಹಕಾರಿಎನಿಸಿರುವ ಬೆಳಗಾವಿ ಜಿಲ್ಲೆಯ  ಬೋರಗಾಂವ ಸೌಹಾದ್ ಸಹಕಾರಿಯ ಅಧ್ಯಕ್ಷರೂ ಆಗಿರುವ ಶ್ರೀ ರಾವ ಸಾಹೇಬ್ ಪಾಟೀಲರವರು ಮಾತನಾಡಿ ದಕ್ಷಿಣ ಕನ್ನಡ ಜಿಲ್ಲೆಯು ಎಲ್ಲ ರಂಗದಲ್ಲೂ ಮುಂಚೋಣೆಯಲ್ಲಿರುವ ಜಿಲ್ಲೆಯಾಗಿದೆ. ಈ ಜಿಲ್ಲೆಯ ಜನ ಸುಸಂಸ್ಕೃತರು. ತಮ್ಮ ಆಥಿಕ ಅಭಿವೃದ್ಧಿ ಸಾಮಾಜಿಕ ಅಭಿವ್ರಧ್ಧಿಯ ಬಗ್ಗೆ ಸದಾ ಚಿಂತನೆ ಮಾಡುವ ಸ್ವಭಾವ ಮೈಗೊಡಿಸಿಕೊಂಡವರು ಕ್ರೀಯಾಶೀಲರು ಹೀಗಾಗಿ ಇಲ್ಲಿ ಯಾವುದೆ ಸಂಸ್ಥೆಯನ್ನು ಹುಟ್ಟುಹಾಕುವಾಗ ಒಂದು ಒಳ್ಳೆಯ ಉದ್ದೇಶವನ್ನು ಹೊಂದಿ ಅದನ್ನು ಕಾರ್ಯಗತಮಾಡುವ ಪ್ರಯತ್ನ ಶೀಲರು ಇವರಾದ್ದರಿಂದ ಬೆಳವಣಿಗೆ ತನ್ನಷ್ಟಕ್ಕೆ ತಾನೆ ಆಗುತ್ತ ಹೋಗುತ್ತದೆ. ಸರಸ್ವತಿ ಸೌಹಾರ್ದ ಸಹಕಾರಿಯಂತೂ ಈಗಾಗಲೆ 6 ಶಾಖೆಗಳನ್ನು ಹೊಂದಿದೆ. 30–35 ಜನ ಉತ್ತಮ ಯುವಕ ಪಡೆ ಕಾರ್ಯನಿರ್ವಹಿಸುತ್ತಿದ್ದಾರೆ ಅನೇಕ ಉತ್ತಮ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ ಹೀಗಾಗಿ ಇದೊಂದು ಮಾದರಿಯಾಗಿ ಬೆಳೆಯುವ ಎಲ್ಲ ಅವಕಾಶಗಳನ್ನು ಹೊಂದಿದೆ ಎಂದು ಹೇಳಿ ಸಹಕಾರಿಗೆ ಶುಭ ಹಾರೈಸಿ ನವೀಕೃತ ಕಟ್ಟಡವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹೊಸಪೇಟೆ ವಿಕಾಸ ಸೌಹಾರ್ದ ಸಹಕಾರಿಯ ಅಧ್ಯಕ್ಷರೂ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರೂ ಆಗಿರುವ ಶ್ರೀ ವಿಶ್ವನಾಥ.ಚ.ಹಿರೇಮಠರವರು ತಾಂತ್ರಿಕ ವಿಭಾಗವನ್ನು ಉದ್ಘಾಟನೆಮಾಡಿ ಇಂದಿನ ಪೈಪೋಟಿ ಯುಗದಲ್ಲಿ ಒಂದು ಸಂಸ್ಥೆಯ ಅಭಿವೃಧ್ಧಿಗೆ ತಾಂತ್ರಿಕತೆಯನ್ನು ಅಳವಡಿಸುವುದು ಅತೀಮುಖ್ಯ ಎಂದು ತಿಳಿಸುತ್ತ ತಾಂತ್ರಿಕತೆಯಿಂದ ಹೇಗೆ ಅಭಿವೃಧ್ಧಿ ಸಾದಿಸಬಹುದು ಎಂಬ ಬಗ್ಗೆ ತಮ್ಮ ಸಂಸ್ಥೆಯ ಬೆಳವಣಿಗೆಯನ್ನೆ ಉದಾಹರಣೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಭಾಷಣಮಾಡಿದ ಸರಸ್ವತಿ ಸೌಹಾರ್ದ ಸಹಕಾರಿಯ ಅಧ್ಯಕ್ಷರೂ ಹಾಗೂ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರೂ ಆಗಿರುವ ಶ್ರೀ ಎಸ್. ಆರ್. ಸತೀಶಚಂದ್ರರವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ 9ನೆ ಸೌಹದ್ ಸಹಕಾರಿಯಾಗಿ ಈಗ 9 ವರ್ಷದ ಹಿಂದೆ ಸ್ಥಾಪಿತವಾಗಿರುವ ಈ ಸರಸ್ವತಿ ಸೌಹಾರ್ದ ಸಹಕಾರಿ ಈಗ 10 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ ಈ ಹತ್ತು ವರ್ಷಗಳಲ್ಲಿ ಈ ರಾಜ್ಯದ ಹಾಗೂ ದಕ್ಷಿಣ ಕನ್ನಡದ ಒಂದು ಉತ್ತಮ ಸೌಹಾರ್ದ ಸಹಕಾರಿಯಾಗಿ ಬೆಳೆದಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಒಂದು ರೀತಿಯ ಫೈನಾನ್ಸಿಯಲ್ ಸೂಪರ್ ಮಾರ್ಕೆಟ್ ಆಗಿ ಕಾರ್ಯ ನಿರ್ವಹಿಸುವ ಕಾಲ ಹತ್ತಿರ ಬಂದಿದೆ. ಸೌಹಾರ್ದ ಸಹಕಾರಿಗಳು ಸದಸ್ಯರಿಗೆ ಬೇಕೆನಿಸಬಹುದಾದ ಅವರ ಆರ್ಥಿಕ ಹಾಗೂ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕಗುತ್ತದೆ ಈ ನಿಟ್ಟಿನಲ್ಲಿ ಸರಸ್ವತಿ ಸೌಹಾರ್ದದಲ್ಲೂ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶ್ರೀ ರಾವಸಾಹೇಬ್ ಪಾಟೀಲ್ ರವರನ್ನು, ಶ್ರೀ ವಿಶ್ವನಾಥ್.ಚ.ಹಿರೇಮಠ್ ದಂಪತಿಯನ್ನು



ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ ದಂಪತಿಯನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ದಕ್ಷಿಣ ಜಿಲ್ಲಾ ಮಾಜಿ ಪಂಚಾಯತ್ ಅಧ್ಯಕ್ಷ ಶ್ರೀ ಬಾಲಕೃಷ್ಣ ಬೋರಕರ್, ಹಾಗೂ ರಾಧಾಕೃಷ್ಣ ಬೋರಕರರವರು ಮಾತನಾಡಿದರು. ಮಾಜಿ ವಿಧಾನ ಪರಿಷತ್ ಮಾಜಿ ಸದಸ್ಯ ಶ್ರೀ ವಿನಯಚಂದ್ರರವರಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ನಿರ್ದೆಶಕ ಶ್ರೀ ಸುನೀಲ್ ಬೋರಕರ ಕಾರ್ಯಕ್ರಮ ನಿರೂಪಣೆ ಮಾಡಿದರು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀವಸಂತ ಸ್ವಾಗತಿಸಿದರು. ಶ್ರೀ ಪದ್ಮನಾಭ ಬೋರಕರವರು ವಂದನೆ ಸಲ್ಲಿಸಿದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪರಿಚಯ

ಯುವ ಸಹಕಾರಿಗಳ ದಶಕಗಳ ಪ್ರಯತ್ನದ ಫಲವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಕ್ಷೇತ್ರವನ್ನು ಪುನರ್ಸಂಘಟಿಸುವ ಹಾಗೂ ಬದಲಾವಣೆಯನ್ನು ತರುವ ಉದ್ದೇಶದಿಂದ 2001ರಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯನ್ನು ಅಂದಿನ ಕೇಂದ್ರ ಸಚಿವರಾದ ಶ್ರೀ ಸುರೇಶ ಪ್ರಭುರವರು ಪುತ್ತೂರಿನಲ್ಲಿ ಉದ್ಘಾಟಿಸಿದರು. ಅಂದಿನಿಂದ ಇಲ್ಲಿಯವರೆಗೆ ಒಂದು ದಶಮಾನದ ಇತಿಹಾಸವನ್ನು ಅನೇಕ ಮೈಲಿಗಲ್ಲುಗಳನ್ನು ದಾಟಿದ ಈ ಸಹಕಾರಿಯ ಪ್ರಗತಿಯು ಶ್ಲಾಘನೀಯ ಹಾಗೂ ಅನುಕರಣಿಯವಾಗಿದೆ.


ಅಂದು ಕೇವಲ 500 ಸದಸ್ಯರು ಹಾಗೂ 10 ಲಕ್ಷ ರೂಗಳ ಪಾಲುಬಂಡವಾಳದೊಂದಿಗೆ ಪ್ರಾರಂಭವಾಗಿದ್ದ ಈ ಸಹಕಾರಿಯು ಕಳೆದ ಹತ್ತು ವರ್ಷಗಳಲ್ಲಿ ಅಧ್ಬುತ ಸಾಧನೆಮಾಡಿರುವುದನ್ನು ಈ ಕೆಳಕಂಡ ಅಂಕಿಅಂಶಗಳಿಂದ ತಿಳಿಯಬಹುದಾಗಿದೆ.ರಾಜ್ಯಕಾಯ್ ವ್ಯಾಪ್ತಿಯನ್ನು ಹೊಂದಿರುವ ಈ ಸಹಕಾರಿಯು ಈಗಾಗಲೆ 6 ಶಾಖೆಗಳನ್ನು ಹೊಂದಿದ್ದು ಸಧ್ಯದಲ್ಲಿಯೇ ಇನ್ನೂ 3 ಶಾಖೆಗಳನ್ನು ತೆರೆಯುವ ಯೋಜನೆ ಹೊಂದಿದೆ.ಕ್ರೀಯಾಶೀಲ ಹಾಗೂ ಯುವ ನಿರ್ದೆಶಕ ಮಂಡಳಿ ಎಲ್ಲ ತರಬೇತಿ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸುವಿಕೆ ಸದಾ ನಗುಮೊಗದ ಸೇವೆ ಸಂಪೂರ್ಣ ಗಣಕೀಕೃತ ವ್ಯವಹಾರ ಸಹಕಾರಿಯ ಮಾಹಿತಿಗಾಗಿ ತನ್ನದೆ ಆದ ವೆಬ್ಸೈಟ್ ಹೊಂದಿರುವುದು ಈ ಸಹಕಾರಿಯ ವಿಶೇಷ.

ಸದಸ್ಯರು 5,340. ಪಾಲುಬಂಡವಾಳ 40 ಲಕ್ಷರೂಗಳು.ಠೇವಣಿ 14.70 ಕೋಟಿರೂಗಳು.ಸಾಲಗಳು 12 ಕೋಟಿ ರೂಗಳು.ದುಡಿಯುವ ಬಂಡವಾಳ 15.38ಕೋಟಿರೂಗಳು ಇದ್ದು 31–3–2010 ಕ್ಕೆ 22 ಲಕ್ಷ ರೂಗಳ ಲಾಭ ಗಳಿಸಿದ್ದು 14% ಡಿವಿಡೆಂಡ ನೀಡಿದ್ದಾರೆ.

ಸದಸ್ಯರಿಂದ ಠೇವಣಿ ಸಂಗ್ರಹಿಸುವುದು ಸದಸ್ಯರಿಗೆ ಸಾಲ ನೀಡುವುದರ ಜೊತೆಗೆ ವಿವಿಧ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. 1.ಇ–ಸ್ಟಾಂಪಿಂಗ ಸೌಲಭ್ಯ 2.ವೆಸ್ಟರ್ನ ಯೂನಿಯನ್ ಮನಿ ಟ್ರಾನ್ಸಫರ್.3.ಜೀವ ಹಾಗೂ ಸಾಮಾನ್ಯ ವಿಮಾ ಸೌಲಭ್ಯ.4.ಡಿ–ಮ್ಯಾಟ್ ಹಾಗೂ ಪಾನ್ ಕಾರ್ಡ ಸೌಲಭ್ಯ.5.ರೈಲುಮುಂಗಡ ಟಿಕೆಟ್ಟುಗಳು ಹಾಗೂ ಮೊಬೈಲ್ ಬಿಲ್ ಪಾವತಿಸುವಿಕೆ. 6. ನಿಗದಿತ ಅವಧಿಯಲ್ಲಿ ಸಾಲ ಹಿಂತಿರುಗಿಸಿದವರಿಗೆ ಶೇಕಡಾ 1% ಬಡ್ಡಿ ರಿಯಾಯಿತಿ ಇತ್ಯಾದಿ.

# ಸೌಹಾರ್ದ ಸಹಕಾರಿ ಸಮಾಚಾರಗಳು

## ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ



ಶಿವಮೊಗ್ಗದಲ್ಲಿ ದಿನಾಂಕ : 10-07-2010ರಂದು ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪರವರೊಂದಿಗೆ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರ ಹಾಗೂ ಅಫೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್. ಎಂ. ಮಂಜುನಾಥ್‌ಗೌಡ ಮತ್ತು ಸಹಕಾರಿಗಳು.

## ಪ್ರಗತಿ ಪಥದಲ್ಲಿ ಚಿತ್ರದುರ್ಗದ ಹೊಯ್ಸಳ ಸೌಹಾರ್ದ ಸಹಕಾರಿ



ಡಿ. ಸುಧಾಕರ



ಎಸ್.ಕೆ.ಮರಳಿ

ರಾಜ್ಯದ ಸಮಾಜಕಲ್ಯಾಣ ಸಚಿವ ಶ್ರೀ ಡಿ.ಸುಧಾಕರರವರ ನೇತೃತ್ವದಲ್ಲಿ ಚಳ್ಳಕೆರೆಯ ಹೊಯ್ಸಳ ಸೌಹಾರ್ದ ಸಹಕಾರಿಯು ಪ್ರಗತಿಪಥದಲ್ಲಿ ಸಾಗುತ್ತಿರುವುದು ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಯ ವಿಷಯ. ಈ ಸೌಹಾರ್ದ ಸಹಕಾರಿಯು ಪ್ರಸಕ್ತ ಮಾರ್ಚ 31ರ ಅಂತ್ಯಕ್ಕೆ 41.91 ಲಕ್ಷರೂಗಳ ಲಾಭ ಗಳಿಸಿದೆಯೆಂದು ಸಹಕಾರಿಯ ಪ್ರಧಾನ ವ್ಯವಸ್ಥಾಪಕ ಶ್ರೀ ಎಸ್.ಕೆ.ಮರಳಿಯವರು ತಿಳಿಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ 16 ಕೋಟಿ ರೂಗಳ ವ್ಯವಹಾರ ನಡೆಸುವುದರ ಮೂಲಕ ಸದಸ್ಯರಿಗೆ ಅಗತ್ಯವಾದ ಸೇವೆಯನ್ನು ಸಲ್ಲಿಸುತ್ತಿದೆ. ಸಹಕಾರಿಯಲ್ಲಿ 84.41 ಲಕ್ಷರೂಗಳ ಬಂಡವಾಳವಿದ್ದು 725 ಲಕ್ಷರೂಗಳ ದುಡಿಯುವ ಬಂಡವಾಳ 514.26.ಲಕ್ಷ ರೂಗಳ ಸಾಲನೀಡಲಾಗಿದೆ. ಸದಸ್ಯರಿಗೆ 20% ಲಾಭಾಂಶನೀಡಲಾಗಿದೆ. ಇತ್ತೀಚೆಗೆ ಇ-ಸ್ಟಾಂಪಿಂಗ ವ್ಯವಹಾರವನ್ನು ಪ್ರಾರಂಭಿಸಿರುವ ಈ ಸಹಕಾರಿಯು ಸಾರ್ವಜನಿಕರಿಗೂ ಉತ್ತಮಸೇವೆ ಸಲ್ಲಿಸುತ್ತಿದೆ.

## ಬೆಂಗಳೂರಿನ ಎಸ್. ಎಲ್. ವಿ. ಸಹಕಾರಿಯ 2ನೇ ಸಾಮಾನ್ಯ ಸಭೆ



ವಿ. ಲಕ್ಷ್ಮೀ ನಾರಾಯಣ

ಬೆಂಗಳೂರಿನ ಎಸ್.ಎಲ್.ವಿ ಸೌಹಾರ್ದ ಸಹಕಾರಿಯ 2ನೇ ಸಾಮಾನ್ಯ ಸಭೆಯು ದಿನಾಂಕ 25-7-2010 ರಂದು ಸಹಕಾರಿಯ ಅಧ್ಯಕ್ಷ ಶ್ರೀ ವಿ.ಲಕ್ಷ್ಮಿನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆದು ತನ್ನ ಸದಸ್ಯರಿಗೆ 7% ಡಿವಿಡೆಂಡ ಘೋಷಣೆ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು 210.11 ಲಕ್ಷರೂಗಳ ಸಾಲ ವಿತರಿಸಿದೆ. 2.82.ಲಕ್ಷ ರುಗಳ ಲಾಭ ಗಳಿಸಿದೆ. ಸಹಕಾರಿಯಲ್ಲಿ ಸಾರ್ವಜನಿಕರಿಗಾಗಿ ಇ-ಸ್ಟಾಂಪಿಂಗ ಸೇವೆಯನ್ನು ಪ್ರಾರಂಭಿಸಿದೆ.

## 8ವರ್ಷಗಳ ಸಾರ್ಥಕ ಸೇವೆಯಲ್ಲಿ ತೀರ್ಥಹಳ್ಳಿಯ ಶ್ರೀ ರಾಮೇಶ್ವರ ಬಹು ಉದ್ದೇಶಿ ಸೌಹಾರ್ದ ಸಹಕಾರಿ




ಮಲೆನಾಡ ಜಿಲ್ಲೆ ಶಿವಮೊಗ್ಗ. ಸಹಕಾರಿ ಕ್ಷೇತ್ರದಲ್ಲಿ ಹಲವು ಸಾಧನೆಗಳನ್ನು ಮಾಡಿರುವ ಜಿಲ್ಲೆ. ಈ ದೇಶಕ್ಕೆ ಈ ನಾಡಿಗೆ ಉತ್ತಮ ಸಹಕಾರಿ ನಾಯಕರನ್ನು ಮಾದರಿ ಸಹಕಾರಿ ಸಂಸ್ಥೆಗಳನ್ನು ಕೊಟ್ಟಿರುವ ಜಿಲ್ಲೆಯಲ್ಲಿ ದೆ ಕಳೆದ 8 ವರ್ಷಗಳಿಂದಕಾರ್ಯನಿರ್ವಹಿಸುತ್ತಿದೆ ತೀರ್ಥಹಳ್ಳಿಯ ಶ್ರೀ ರಾಮೇಶ್ವರ ಬಹು ಉದ್ದೇಶಿ ಸೌಹಾರ್ದ ಸಹಕಾರಿ. 2007ರಲ್ಲಿ ತನ್ನದೆ ಆದ ಸ್ವಂತ ಕಟ್ಟಡವನ್ನು ಹೊಂದಿರುವ ಈ ಸಹಕಾರಿಯಲ್ಲಿ 16,21,750 ರೂಗಳ ಬಂಡವಾಳವಿದ್ದು 60,65,438 ರೂಗಳ ಠೇವಣಿ ಇದೆ.ಸಮೃದ್ಧ ಸತ್ಯನಿಧಿ ಖಾತೆಯಲ್ಲಿ 60,44,104 ರೂಗಳು ಇವೆ.ಸದಸ್ಯರಿಗೆ 2,10,32,570ರೂ. ಸಾಲಗಳನ್ನು ನೀಡಿದೆ.

ಈ ಸಹಕಾರಿಯು ಆರಂಭದಿಂದಲೂ ಲಾಭದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು ಸಂಪೂರ್ಣ ಗಣಕೀಕರಣ ಹೊಂದಿದೆ ಸದಸ್ಯರಿಗೆ ಮಣಿಪಾಲ ಹೆಲ್ತ್‌ಕಾರ್ಡ,ಸಾರ್ವಜನಿಕರಿಗೆ ಇ-ಸ್ಟಾಂಪಿಂಗ ಸೇವೆ,ಸಿಮೆಂಟ ಎಜನ್ಸಿ, ಪವರ್ ಟಿಲ್ಲರ್‌ಗಳ ಮಾರಾಟ ಮಲ್ಟಿಸಿಟಿ ಚೆಕ್ ಸೌಲಭ್ಯ ನ್ಯಾಶನಲ್ ಇನ್ಸುರೆನ್ಸ ಮುಂತಾದ ಸೌಲಭ್ಯಗಳನ್ನು ನೀಡುತ್ತಿದೆ.

ಈ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಎಂ.ಎಂ.ಲಕ್ಷ್ಮೀನಾರಾಯಣ, ಉಪಾಧ್ಯಕ್ಷರಾಗಿ ಶ್ರೀ ಬಿ.ಎಸ್.ರಾಮಚಂದ್ರ, ನಿರ್ದೇಶಕರುಗಳಾಗಿ ಶ್ರೀ ಡಿ.ಎಮ್. ಮನುದೇವ, ಶ್ರೀ ಟಿ.ಎ.ಚಂದ್ರಶೇಖರ, ಶ್ರೀ ಕೆ.ಸಿ.ಚಂದ್ರಶೇಖರ, ಶ್ರೀಮತಿ ಜೆ.ಕೆ.ಸುಜಾತ, ಶ್ರೀ ಮಂಜುನಾಥ ಶೆಟ್ಟಿ, ಶ್ರೀ ಎಮ್. ಆರ್.ಜಯಶೀಲ, ಶ್ರೀ ಕವಿರಾಜ.ಬಿ., ಶ್ರೀ ಮಧುಕರ ಮಯ್ಯ, ಶ್ರೀ ಯು.ದಿನಕರ ಕಿಣಿಯವರು ಕಾರ್ಯನಿರ್ವಹಿಸುತ್ತಿದ್ದಾರೆ.

...1ನೇ ಪುಟದಿಂದ
ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕೆಂದು ಕಿವಿಮಾತು ಹೇಳಿದ್ದಾರೆ. ಇದೇ ಕಾರ್ಯಕ್ರಮದಲ್ಲಿ ಜಲಸಂಪನ್ಮೂಲ ಸಚಿವ ಶ್ರೀ ಬಸವರಾಜ ಬೊಮ್ಮಾಯಿ ಇ–ಸ್ಟಾಂಪಿಂಗ ಕಾರ್ಯಾಚರಣೆಯನ್ನು ಅಧಿಕೃತವಾಗಿ ಘೋಷಿಸಿದ್ದಾರೆ. ಅನೇಕ ಗಣ್ಯರು ಸಹಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ತಮ್ಮ ಬೆಂಬಲ ಹಾಗೂ ಪ್ರೋತ್ಸಾಹವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದ್ದಾರೆ.ಹೀಗಾಗಿ ನಾವೆಲ್ಲ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುವುದು ಅಗತ್ಯವೆಂದರು.

ಅಧಿಕೃತ ಕಾರ್ಯಕಲಾಪಗಳು ಬಹಳ ಉತ್ತಮ ರೀತಿಯಲ್ಲಿ ನಡೆದು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಅನೇಕ ಉತ್ತಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಭಾಗವಹಿಸಿದ ಪ್ರತಿನಿಧಿಗಳು ನೀಡಿದರು.ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ಸಭೆಯ ನೋಟೀಸು, ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ, ಅನುಪಾಲನಾ ವರದಿಗಳನ್ನು ಸಭೆಗೆ ಮಂಡಿಸಿದರು.ಕೊನೆಯಲ್ಲಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ವಂದನಾರ್ಪಣೆ ಸಲ್ಲಿಸಿದರು.





# ಅರ್ಥಪೂರ್ಣ ಚರ್ಚೆ ಅಭಿ







ಉತ್ತಮ ಕ್ರೆಡಿಟ್ ಸೌಹಾರ್ದಗಳೆಂದು ಶಿವಮೊಗ್ಗದ ಆರ್ಯವೈಶ್ಯ ಸಹಕಾರಿ ಸಂಘಕ್ಕೆ ಸನ್ಮಾನ : ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರಿಂದ ಪ್ರಶಸ್ತಿ ಸ್ವೀಕಾರ.

## ಕರ್ನಾಟಕ ರಾಜ್ಯ ಕ್ರೆಡಿಟ್ ಸೊ
## 5ನೇ ಸಾಮ


ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟಿಸ್ ಅಸ್ಸೋಸಿಯ
5–8–2010 ರಂದು ನಗರದ ಸರ್.ಪುಟ್ಟಣ್ಣಚೆಟ್ಟಿ ಟೌನಹಾ
ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ನಡೆದು ರಾಜ್ಯದಲ್ಲಿ ಕ್ರೆಡಿ
ಅನೇಕ ಕಾರ್ಯಕ್ರಮಗಳನ್ನು ಡಿಸೆಂಬರ ಮಾಹೆಯಲ್ಲಿ ರಾ

ಸಮಾರಂಭದಲ್ಲಿ ಉತ್ತಮ ಕ್ರೆಡಿಟ್ ಸೌಹಾರ್ದಗಳೆ
ಸಹಕಾರಿಯನ್ನು ಹಾಗೂ ಶಿವಮೊಗ್ಗದ ಆರ್ಯವೈಶ್ಯ ಸ




## ದಿನಾಂಕ 5-08-2010 ರಂದು ನಡೆದ 9ನೇ ಸಾಮಾನ್ಯ ಸಭೆ ಗುಣಾತ್ಮಕ ಚರ್ಚೆ, ಅಭಿವೃದ್ಧಿಪರ ಚಿಂತನೆ.

# ವೃದ್ಧಿಗೆ ಪೂರಕ ಸಲಹೆಗಳು





### ಸೈಟಿಸ್ ಅಸ್ಸೋಸ್ಸಿಯೇಶನ್ ಾನ್ಯ ಸಭೆ

ಯೇಶನ್ 5ನೆ ಸಮಾನ್ಯ ಸಭೆಯು ಇದೇ ದಿನಾಂಕ ಲ್ನಲ್ಲಿ ಅಸ್ಸೋಸ್ಸಿಯೇಶನ್ ಅಧ್ಯಕ್ಷ ಶ್ರೀ ರಾವಸಾಹೇಬ್ ಟ್ ಸಹಕಾರ ಸಂಘಗಳ ಅಭಿವೃದ್ಧಿಯ ದೃಷ್ಟಿಯಿಂದ ್ಯ ಸಮಾವೇಶವನ್ನು ಹಮ್ಮಿಕೊಳ್ಳಲು ತಿರ್ಮಾನಿಸಿತು.

ಂದು ಸಿಂಧನೂರಿನ ಶ್ರೀ ಬಸವೇಶ್ವರ ಸೌಹಾರ್ದ ಹಕಾರಿ ಸಂಘಗಳನ್ನು ಸನ್ಮಾನಿಸಲಾಯಿತು.



ಉತ್ತಮ ಕ್ರೆಡಿಟ್ ಸೌಹಾರ್ದಗಳೆಂದು ಸಿಂಧನೂರಿನ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿಗೆ ಸನ್ಮಾನ : ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರಿಂದ ಪ್ರಶಸ್ತಿ ಸ್ವೀಕಾರ.

# ಆಂತರಿಕ ಸಂಬಂಧಗಳ ನಿರ್ವಹಣೆ

**ಇಂದು ಏನಾಗಿದೆ. ಎತ್ತರದ ಮನೆಗಳಿವೆ. ಮನಸ್ಸುಗಳು ಸಣ್ಣದಾಗಿವೆ.ಹೆಚ್ಚು ವೆಚ್ಚ ಮಾಡುತ್ತೇವೆ ಕಡಿಮೆ ದುಡಿಯುತ್ತೇವೆ.ಮಿತಿಮೀರಿ ಮಾತನಾಡುತ್ತೇವೆ.ಪ್ರೀತಿಸುವುದನ್ನೆ ಮರೆತಿದ್ದೇವೆ,ದೂರದ ಚಂದ್ರನಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗಿದೆ. ಹತ್ತಿರದವರನ್ನು ಕಾಣಲು ಸಮಯವಿಲ್ಲ ಮನಸ್ಸಿಲ್ಲ.**

ಶ್ರೀ ಬಿ.ಎ.ಮಹಾದೇವಪ್ಪನವರು ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿ. ಜಂಟಿನಿಬಂಧಕರಾಗಿ ಪ್ರಸ್ತುತ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲದಕ್ಕಿಂತಲೂ ಅವರೂಬ್ಬ ಉತ್ತಮ ಸಹಕಾರಿ ಅಧಿಕಾರಿ.ಸ್ನೇಹಜೀವಿಮತ್ತು ಮಾನವತಾವಾದಿ. ಉತ್ತಮ ತರಬೇತಿದಾರ. ಸಹಕಾರಿ ಕ್ಷೇತ್ರದಲ್ಲಿ ಹಾಗೂ ಸಮಾಜದಲ್ಲಿ ವಿವಿಧ ರಂಗಗಳಲ್ಲಿ ಉತ್ತಮ ಹಾಗೂ ದಕ್ಷ ಯುವನಾಯಕತ್ವದ ಅಗತ್ಯವನ್ನು ಒತ್ತಿ ಹೇಳುವ ಶ್ರೀಯುತರು ಸಹಕಾರಿಗಳಿಗೆ,ಅಧಿಕಾರಿಗಳಿಗೆ ಯುವ ಸಮೂಹಕ್ಕೆ ವಿವಿಧ ವಿಷಯಗಳ ಬಗ್ಗೆ ಸಮಾಜದ ವಿವಿಧ ಹಂತಗಳಲ್ಲಿ ತರಬೇತಿ ನೀಡುವ ಹವ್ಯಾಸವನ್ನು ರೂಢಿಸಿಕೊಂಡಿದ್ದಾರೆ. ಕಚೇರಿ ಆಡಳಿತ,ಸಮಯ ನಿರ್ವಹಣೆ,ಒತ್ತಡ ನಿರ್ವಹಣೆ,ಆಂತರಿಕ ಸಂಬಂಧಗಳ ನಿರ್ವಹಣೆ ಟೀಮ ಬಿಲ್ಡಿಂಗ ಪರಿಣಾಮಕಾರಿ ಸಂವಹನ ವೃತ್ತಿ ಸಂಸ್ಕೃತಿ ಹೀಗೆ ಮಾನವ ಸಂಪನ್ಮೂಲಗಳನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬಹುದು ಎಂಬ ಅನೇಕ ವಿಷಯಗಳ ಬಗ್ಗೆ ಬಹಳ ಆಕರ್ಷಕ ಹಾಗೂ ಪರಿಣಾಮಕಾರಿ ಉಪನ್ಯಾಸ ನೀಡುವ ಶ್ರೀಯುತರು ದಿನಾಂಕ ೨೫-೨-೨೦೧೦ರಂದು ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಆಂತರಿಕ ಸಂಭಂದಗಳ ನಿರ್ವಹಣೆಯ ಬಗ್ಗೆ ನೀಡಿದ ಉತ್ತಮ ಉಪನ್ಯಾಸದ ವಿಷಯಗಳನ್ನು ವಿವಿಧ ಸಹಕಾರಿಗಳ ಅನುಕೂಲಕ್ಕಾಗಿ ಪ್ರಕಟಿಸಲಾಗಿದೆ.

ನೆಮ್ಮದಿಯ ಜೀವನ ಬೇಕೆಂದರೆ ಇತರರೂಡನೆ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುವುದು ಅವಶ್ಯಕ. ಸರಸ ಜನನ–ವಿರಸ ಮರಣ –ಸಮರಸವೇ ಜೀವನ ಎಂಬ ಕವಿವಾಣಿಯೊಂದಿಗೆ ಪರಸ್ಪರ ಹೊಂದಾಣಿಕಯನ್ನು ಸಮರಸವೆಂದು ವ್ಯಾಖ್ಯಾನಿಸೋಣ. ಇಂದು ಮನುಷ್ಯನಿಗೆ ಉಣಲು ಊಟ, ಉಡಲು ಬಟ್ಟೆ,ಇರಲು ಮನೆ ನಿರ್ಭಯ ವಾತಾವರಣದ ಸಮಾಜ ಪ್ರೀತಿ ವಿಶ್ವಾಸ ಕೊಡುವ ಕುಟುಂಬದ ಸದಸ್ಯರು ಸಮಯಕ್ಕೆ ಆಗುವ ಆಪ್ತರು ಶ್ರಮಕ್ಕೆ ತಕ್ಕ ಪ್ರತಿಫಲ ಇವೆಲ್ಲ ದೊರೆತರೆ ನಾವುಗಳೆಲ್ಲ ಅದೃಷ್ಟವಂತರೆ ಸರಿ.ಆದರೆ ಇವೆಲ್ಲ ಇದ್ದೂ ಸಹ ನಮಗೆ ನೆಮ್ಮದಿಯ ಬದುಕು ಸಿಗುತ್ತಿಲ್ಲ ಎಕೆ? ಈ ಬಗ್ಗೆ ಆಳವಾದ ಚಿಂತನೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಮ್ಮಿಂದಾಗಬೇಕಿದೆ.

"ಹೊಂದಾಣಿಕೆ" ಇಂದಿನ ಅವಶ್ಯಕತೆ ಎಂಬುದನ್ನು ನಾವು ಅರಿತು ಕಾರ್ಯ ನಿರ್ವಹಿಸಬೇಕಿದೆ. ಬದುಕಿನ ಪ್ರತಿಯೊಂದು ಹಂತದಲ್ಲಿ ಹೊಂದಾಣಿಕೆಯನ್ನು ನಾವು ನೋಡುತ್ತೇವೆ ಅನುಭಾವಿಸುತ್ತೇವೆ ಆದರೆ ಸ್ವಂತ ಸುಖಕ್ಕಾಗಿ ಇನ್ನೂಬ್ಬರ ಸುಖಕ್ಕಾಗಿ ನೆಮ್ಮದಿಯ ಬದುಕಿಗೆ ಕೆಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದರಲ್ಲಿ ವಿಫಲರಾಗುತ್ತೇವೆ. ನಿಜ ಜೀವನದ ಕೆಲವು ಉದಾಹರಣೆಗಳಿಂದ ನಾವು ಹೊಂದಾಣಿಕೆಯನ್ನು ಅರಿತುಕೊಳ್ಳಬಹುದಾಗಿದೆ. ಬಿಳಿಯ ಹಾಲು–ಕರಿಯ ಕಾಫೀಪುಡಿ ಸಿಹಿ ಸಕ್ಕರೆಯ ಹೊಂದಾಣಿಕೆ.ಸಾಂಬಾರು ರುಚಿಯಾಗಲು ಹುಳಿ–ಉಪ್ಪು–ಖಾರಗಲ್ಲಿ ಹೊಂದಾಣಿಕೆ. ಊಟಮಾಡುವಾಗ ಕೈ–ಬಾಯಿ–ಹಲ್ಲು – ನಾಲಿಗೆ–ಗಂಟಲು–ಜಠರ–ಕರುಳು–ಜೀರ್ಣಕ್ರೀಯೆ ಇವೆಲ್ಲ



ಲೇಖನ :
**ಬಿ. ಎ. ಮಹದೇವಪ್ಪ,** ಕೆ.ಸಿ.ಎಸ್.
ಸಹಕಾರ ಸಂಘಗಳ ಜಂಟಿನಿಬಂಧಕರು

ಹೊಂದಾಣಿಕೆಯ ಪ್ರಕ್ರೀಯೆಗಳಲ್ಲದೆ ಮತ್ತೇನು. ಊಟ,ಬಟ್ಟೆ,ಮನೆ ಭದ್ರತೆ ಹಿಂದೆ ಅದೆಷ್ಟೊ ಜನರ ಕಾಯಕದ ಹೊಂದಾಣಿಕೆ ಇದೆ ಇದು ಪರಾವಲಂಬನೆಯೂ ಅಲ್ಲ ಸ್ವಾವಲಂಬನೆಯೂ ಅಲ್ಲ ಇದು ಪರಸ್ಪರ ಅವಲಂಬನೆ ಅದೇ ಹೊಂದಾಣಿಕೆ. ಇದು ನಮ್ಮ ನೆಮ್ಮದಿಯ ಬದುಕಿಗೆ ಅಳವಡಿಸಲು ಬೇಕಾದ ಅಗತ್ಯ ವಿಷಯ. ಪ್ರತಿಯೊಬ್ಬರಿಗೂ ಖಾಸಗಿ ಹಾಗೂ ಸಾರ್ವಜನಿಕ ಎಂಬ ಎರಡು ಜೀವನಗಳಿವೆ ಇವೆರಡರ ಸಂಬಂದ ಸರಿಯಿರಬೇಕು.ಭಾವನಾತ್ಮಕ ಸಂಬಂದಗಳ ಬೆಳವಣಿಗೆ ಅಗತ್ಯ.

ಆದರೆ ಇಂದು ಏನಾಗಿದೆ. ಎತ್ತರದ ಮನೆಗಳಿವೆ. ಮನಸ್ಸುಗಳು ಸಣ್ಣದಾಗಿವೆ.ಹೆಚ್ಚು ವೆಚ್ಚ ಮಾಡುತ್ತೇವೆ ಕಡಿಮೆ ದುಡಿಯುತ್ತೇವೆ.ಮಿತಿಮೀರಿ ಮಾತನಾಡುತ್ತೇವೆ.ಪ್ರೀತಿಸುವುದನ್ನೆ ಮರೆತಿದ್ದೇವೆ,ದೂರದ ಚಂದ್ರನಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗಿದೆ. ಹತ್ತಿರದವರನ್ನು ಕಾಣಲು ಸಮಯವಿಲ್ಲ ಮನಸ್ಸಿಲ್ಲ. ವಿಶ್ವಶಾಂತಿ ಹೇಳುತ್ತೇವೆ ಮನೆಯಲ್ಲಿ ಯುದ್ಧ ನಡೆಯುತ್ತಿದೆ. ಬಗೆ ಬಗೆಯ ಆಹಾರಗಳು ಬಂದಿವೆ.ಆರೋಗ್ಯ ಕೆಟ್ಟಿದೆ. ಸ್ನೇಹಿತರ ಮಧ್ಯೆ ಮನಸ್ತಾಪಗಳು ಹೆಚ್ಚಾಗುತ್ತಲಿವೆ. ಮನೆ ಮಂದಿ ಒಂದು ಕಡೆ ಕೂತು ಮಾತನಾಡಲು ಸಮಯವಿಲ್ಲ ಮನಸ್ಸಿಲ್ಲ.ಬಾಂಧವ್ಯಗಳು ಕಡಿಮೆಯಾಗುತ್ತಿವೆ. ಬದುಕು ಯಾಂತ್ರಿಕವಾಗುತ್ತಿದೆ.ಮಕ್ಕಳು ದೊಡ್ಡವರ ಮಧ್ಯೆ ಅಂತರ ಹೆಚ್ಚಾಗುತ್ತಿದೆ.ಕೂಡುವುದಕ್ಕಿಂತ ಹೆಚ್ಚು ಅಗಲುತ್ತಿದ್ದೆವೆ. ವ್ಯಾಪಾರದಲ್ಲಿ ಕಲಹಗಳು ಹೆಚ್ಚಾಗುತ್ತಿವೆ.ಉದ್ಯೋಗದಲ್ಲಿ "ಈಗೋ"ಮನೆಯಲ್ಲ "ಈಗೋ" ನನ್ನ ಗಂಡ/ಹೆಂಡತಿ ನನಗೆ ಎದುರು ಮಾತನಾಡದಿರಲಿ–ನನ್ನ ಮಕ್ಕಳು ನಾನು ಹೇಳಿದಂತೆ ಕೇಳಲಿ.ನೆರೆಮನೆಯವರು ದುರ್ಬುಧ್ಧಿ ಬಿಡಲಿ ನನ್ನ ಸಹೋದ್ಯೋಗಿಗಳು ನನ್ನಂತೆಯೆ ಕೆಲಸಮಾಡಿ ಬಾಸ್ಗೆ ಒಳ್ಳೆಯ ಬುದ್ಧಿ ಬರಲಿ ಹೀಗೆ ನೀರೀಕ್ಷೆಗಳು. ಇವು ಒಳ್ಳೆಯವು ಹೌದು. ಆದರೆ ನಾನು,ನನ್ನದು ನಾನೇ ಮೊದಲು ನಾನೇ ಸರಿ ಎಂಬ ಭಾವನೆಗೆ ಕಡಿವಾಣ ಬೇಕಲ್ಲವೇ? ಯಾಕೆಂದರೆ ಇದರಿಂದ ಮಾನವ ಸಂಬಂಧಗಳಿಗೆ ಆಘಾತವಾಗುತ್ತದೆ.

ಇದಕ್ಕಾಗಿ ನಮ್ಮಲ್ಲಿ ಬದಲಾವಣೆಯಾಗಬೇಕಿದೆ. ಮೊದಲು ನಮ್ಮನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಹಾಗಾದಾಗಮಾತ್ರ ನಮ್ಮ ಜೀವನಕ್ಕೆ ನೆಮ್ಮದಿ ನಾವು ವಾಸಿಸುತ್ತಿರುವ ಪರಿಸರದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ. ನಮ್ಮ ಆಂತರಿಕ ಸಂಬಂಧಗಳ ಬೆಳವಣಿಗೆಯಿಂದ ಜೀವನದಲ್ಲಿ ನೆಮ್ಮದಿಯುನ್ನು ಕಂಡುಕೊಳ್ಳಬಹುದು.

ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಯಲ್ಲಿ ಉತ್ತಮ ಆಂತರಿಕ ಸಂಬಂಧಗಳ ನಿರ್ವಹಣೆ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಸಹಕಾರಿ ಕ್ಷೇತ್ರ ಪ್ರತಿಯೊಬ್ಬರಿಗು ಆರ್ಥಿಕ ಹಾಗು ಸಾಮಾಜಿಕ ಭದ್ರ ಬುನಾದಿಯನ್ನು ಒದಗಿಸುವ ಕ್ಷೇತ್ರವಾಗಿರುವುದರಿಂದ ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸದಸ್ಯರಾದಿಯಾಗಿ ಅಧ್ಯಕ್ಷರವರಿಗೆ ಎಲ್ಲರೂ ಎಲ್ಲರೊಂದಿಗೆ ಉತ್ತಮ ಬಾಂಧವ್ಯ ಹಾಗು ಆಂತರಿಕ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವುದು ಅವಶ್ಯಕ ಹಾಗು ಅನಿವಾರ್ಯ.

ಆಂತರಿಕ ಸಂಬಂಧಗಳ ನಿರ್ವಹಣೆಗೆ ಕೆಲವು ಒಳ್ಳೆಯ ಗುಣಗಳನ್ನು ಹೊಂದುವುದು ಅಗತ್ಯ ಅವುಗಳಲ್ಲಿ ಯಾರನ್ನು ಟೀಕಿಸದಿರುವುದು, ದೂಸಿಸದಿರುವುದು, ದೂರದಿರುವುದು ಮೊದಲನೆಯ ಹೆಜ್ಜೆಯಾಗಬೇಕು. ತಪ್ಪುಗಳನ್ನು ಹುಡುಕದೆ ತಪ್ಪುಗಳಿಗೆ ಪರಿಹಾರವನ್ನು ಹುಡುಕುವುದು ಮಾತುಗಾರಿಕೆಯಲ್ಲಿ ಆತ್ಮಿಯತೆ, ಕಷ್ಟಪಟ್ಟು ಕೆಲಸ ಮಾಡದೆ ಇಷ್ಟಪಟ್ಟು ಕೆಲಸ ಮಾಡುವುದು ವೃತ್ತಿಯಲ್ಲಿ ಪರಿಣತಿಯನ್ನು ಸಾಧಿಸುವುದು ಉತ್ತಮ ಸಂವಹಣೆಯನ್ನು ಬೆಳೆಸಿಕೊಳ್ಳುವುದು. ನೇರವಾಗಿ ಮಾತನಾಡುವುದು, ಇತರರಲ್ಲಿ ಆಸಕ್ತಿ ತೋರಿಸುವುದು ಎಲ್ಲರೊಂದಿಗೆ ಮುಕ್ತವಾಗಿ ಇರುವುದು, ಸಂಸ್ಥೆಯ ಭವಿಷ್ಯದ ಬಗ್ಗೆ ಕಾಳಜಿ ವಹಿಸುವುದು, ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವುದು, ಸರ್ವಾಧಿಕಾರಿಯಂತೆ ವರ್ತಿಸುವುದನ್ನು ಬಿಟ್ಟು ಸ್ನೇಹಿತನಂತೆ ವರ್ತಿಸಿ ಅವರ ಕಷ್ಟ–ಸುಖಗಳ ಬಗ್ಗ ಕಾಳಜಿ ವಹಿಸುವುದು ನಮ್ಮ ಸಂಬಂಧಗಳನ್ನು ಗಟ್ಟಿಯಾಗಿರುವಂತೆ ಮಾಡುತ್ತದೆ. ನೆಮ್ಮದಿಯ ಜಿವನಕ್ಕೆ ನಾಂದಿ ಹಾಡುತ್ತದೆ, ಸಂಸ್ಥೆಯ ಅಭಿವೃದ್ಧಿಗೆ ಅಡಿಗಲ್ಲಾಗುತ್ತದೆ. ನಾವೆಲ್ಲಿ ನಮ್ಮ ಆಂತರಿಕ ಸಂಬಂಧಗಳನ್ನು ಸರಿಪಡಿಸಿಕೊಂಡು ವೃದ್ಧಿ ಪಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದಾಗ ಮಾತ್ರ ನೆಮ್ಮದಿಯ ಬದುಕು, ಸುಖಿ ಸಮಾಜ ನಿರ್ಮಾಣ ಸಾಧ್ಯ.

# ನೆರೆ ಪರಿಹಾರ ನಿಧಿಗೆ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ನೀಡಿರುವ ವಂತಿಗೆ ವಿವರಗಳು

| Member Code | Co-operative Name | Amount |
|---|---|---|
| DWD-01 | The Dharwad Credit Souharda Sahakari Ni., | 50000.00 |
| BGM-120 | The Belagavi Liberal Credit Souharda Co-operative Ltd., | 4250.00 |
| CKM-01 | Gayathri Vividoddesha Souharda Sahakari Ni | 1500.00 |
| CKM-01 | Gayathri Vividoddesha Souharda Sahakari Ni | 10000.00 |
| RCR-03 | Manvi Pattana Souharda Sahakari Bank Ni., | 200000.00 |
| TMK-03 | The Pavagada Souharda Credit Co-operative Ltd., | 100000.00 |
| BGU-76 | I.V.Employees Credit Souharda Sahakari Ltd., | 5000.00 |
| BGM-69 | Sree adinatha Pattina Souharda Sahakari Ni., | 2500.00 |
| KWR-36 | Hemadri Souharda Pattina Sahakari Ni., | 1000.00 |
| DVG-07 | Sri Anjaneya Vividoddesha Souharda Sahakari Ni., | 2600.00 |
| BGM-344 | Sree Siddeshwara Credit Sahakari Ni., | 1000.00 |
| SMG-06 | Mayura Souharda Credit Co-operative Ltd., | 5000.00 |
| GLB-15 | Hemareddy Mallamma Souharda Pattina Sahakari Ni., | 10000.00 |
| DVG-05 | Pragathi Souharda Abiruddi Sahakari Ni., | 2000.00 |
| BGM-54 | Sree Pashwanatha Credit Sahakari Ltd., | 5000.00 |
| TMK-58 | Sneha Souharda Pattina Sahakari Ni | 2500.00 |
| DVG-06 | Sree Gayathri Souharda Pattina Sahakari Ni | 2000.00 |
| TMK-29 | Sree Vittala souharda Pattina Sahakari Ni., | 5000.00 |
| TMK-34 | Sree Udaya Ravi Pattina Sahakari Ni., | 10000.00 |
| BJP-28 | Sree Basaweshawra Souharda Pattina Sahakari Ni., | 5000.00 |
| BGM-222 | Sree Ananthanatha Alpasankyatara Vividoddeshagala Souharda Sahakari Ni., | 5000.00 |
| BJP-70 | Sree Banashankari Souharda Credit Co-operative Ltd., | 4000.00 |
| BGK-20 | Sree Daneshwari Souharda Pattina Sahakari Ni., | 5000.00 |
| TMK-14 | BSNL Noukarara Souharda Pattina Sahakari Ni., | 10000.00 |
| KPL-01 | Tavaragera Pattana Souharda Sahakara Bank Ni., | 6126.00 |
| MYS-04 | Mysore & Chamarajanagar District Motor Owners Souharda Sahakari Ltd., | 10000.00 |
| TMK-12 | Sneha Souharda Pattina Sahakari Ni., | 5001.00 |
| BGK-40 | Siddarth Urban Credit Co-op Ltd., | 1000.00 |
| HVR-10 | Sree Channesha Pattina souharda Sahakari Ni., | 5000.00 |
| KWR-34 | Ambika Pattina Souharda Sahakari Ni., | 5000.00 |
| UDP-06 | Sai Souharda Credit Co-op Ltd., | 2001.00 |
| SMG-20 | Sree Sharada Vividoddesha Souharda Sahakari Ni., | 3000.00 |
| SMG-11 | Sri Ganda Souharda Credit Co-operative Ltd., | 5000.00 |
| BGM-91 | Hira Credit Souharda Sahakari Niy., | 500.00 |
| BGM-107 | Alpasankyatara Pattina Souharda Sahakari Ni., | 2000.00 |
| RCR-07 | Saptagiri Pattina Souharda Sahakari Ni., | 10000.00 |
| BEL-26 | Mitra Souharda Credit Co-operative Ltd., | 1000.00 |
| BGU-40 | Sree Vemana Souharda Credit Co-operative Ltd., | 10000.00 |
| BEL-10 | Balaji Vividoddesha Souharda Sahakari Ni., | 1001.00 |
| HSN-03 | Sahana Souharda Pattina Sahakari Ni., | 5000.00 |
| BGU-59 | Anyonya Souharda Credit Co-operative Ltd., | 1001.00 |
| RCR-25 | Arunodaya Mahila Swasahaya Souhrda Sahakari | 1000.00 |
| HVR-03 | Adishakthi Souharda Sahakari Ni., | 10000.00 |
| BJP-37 | Adarsha Souharda Pattina Sahakari Ni., | 2500.00 |
| MYS-06 | Mysore Credit Souharda Sahakari Ltd., | 25000.00 |
| SMG-24 | Kodachadri Adike souharda Sahakari Ni., | 2000.00 |
| BGU-43 | Sree Ygnavalkalya Souharda Credit Co-op Ltd., | 5000.00 |
| BJP-05 | Sree Lingeshwara Gruha Nirmana Souharda Sahakari Ni., | 1500.00 |
| MYS-05 | Padaki Souharda Credit Co-operative Ltd., | 10000.00 |
| BGM-249 | Sree Tadasala Vivida Uddeshagala Souharda Sahakari Ni., | 3000.00 |
| KWR-47 | Bhagyashree Vividoddeshagala Souharda Sahakari Ni., | 1200.00 |
| KWR-11 | Sree Vivek Credit Souharda Sahakari Ni., | 2000.00 |
| BGM-18 | Yamanakaradi Balakrishna Souharda Pasttina Sahakari Ni., | 2000.00 |
| BGM-216 | Sree Hari Credit Souharda Sahakari Ni., | 1000.00 |

## ನೆರೆ ಪರಿಹಾರ ನಿಧಿಗೆ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ನೀಡಿರುವ ವಂತಿಗೆ ವಿವರಗಳು

| | | |
|---|---|---|
| SMG-23 | Jeevana Souharda Vividoddesha Sahakari Ni., | 1000.00 |
| HSN-09 | Arya Vysya souharda Sahakari Ni., | 2000.00 |
| KPL-33 | Koppala Taluk Veera Rani Kitturu Chennamma souharda Pattina Sahakari Ni., | 1000.00 |
| KWR-50 | Shubodaya Souharda Sahakari Ni., | 1001.00 |
| BGU-60 | Valsala Credit Souharda Co-operative Ltd., | 5000.00 |
| BGM-40 | Amantarn Souharda Multipurpose Sahakari Ltd.,. | 1000.00 |
| BGM-135 | Panchama Shivalingeshwara Vivida Uddeshagala Sahakara Sanga | 5000.00 |
| BGM-04 | Sree Arihanth Credit Souharda Sahakari Ltd., | 100000.00 |
| BGM-327 | Vidya Kiran Credit Sahakari Ni., | 1000.00 |
| BGU-22 | Ashwattapura Pattina Souharda Sahakari Ni., | 5001.00 |
| BJP-36 | Sree Balaji Souharda Pattina Sahakari Ni., | 2000.00 |
| BGU-31 | Kennametal Employees Souharda Credit Co-operrative Ltd., | 5001.00 |
| BGU-33 | Shree Kalikamba Souharda Sahakari Ni., | 6000.00 |
| SMG-04 | Siri Souharda Credit Co-operative Ltd., | 2000.00 |
| KWR-16 | Kumata Adike Marata Souharda Sahakari Ltd., | 5000.00 |
| CKM-03 | Yadagere Souharda Credit Co-operative Niyamita | 5000.00 |
| BGU-50 | Sree Padmavathi souhrda sahakari Ni., | 1500.00 |
| TMK-62 | Suvarna Souharda Pattina Sahakari Ni., | 10000.00 |
| DWD-14 | Sree Renukadevi Mahila Urban Credit Souharda Sahakari Ni., | 500.00 |
| KWR-10 | Vidyarthi souharda Sahakari Ni., | 3000.00 |
| SMG-19 | Abayam souharda Pattina Sahakari Ni., | 1000.00 |
| BGU-10 | The Janaseva Souharda Sahakari Ni., | 1575.00 |
| DVG-07 | Sri Anjaneya Vividoddesha Souharda Sahakari Ni., | 5000.00 |
| | Sree S.R.Sathishchandra, President of Karnataka State Souharda Federal Co-operative Ltd., | 6060.00 |
| GLB-36 | Gulbarga Mahila Souharda Pattina Sahakari Ni., | 10000.00 |
| SMG-22 | Kasturba Mahila Vividoddesha Souharda Sahakari Ni., | 1000.00 |
| SMG-28 | Amrutha Vividoddesha Souharda Sahakari Ni., | 1000.00 |
| BGU-07 | Shushruthi Souharda Sahakari Bank Ni., | 100000.00 |
| UDP-01 | Janapriya Vividoddesha Souharda Shakari Ni., | 10000.00 |
| TMK-48 | Sri Vasavi souharda Credit co-operative | 5000.00 |
| BGM-121 | Sree Renukadevi Souharda Credit Sahakari Ni., | 5100.00 |
| MNG-01 | Sri Saraswathi Credit Souharda Sahakari Ltd., | 25000.00 |
| BGU-09 | The Asiatic Credit souharda Sahakari Ltd., | 1741.00 |
| CKM-10 | Vinayaka vividoddesha Souharda Sahakari Ni., | 2500.00 |
| BGM-113 | Akkamahadevi Mahila Pattina Souharda Sahkari Ni., | 5000.00 |
| TMK- 03 | Pavagada Souharda Sahakari Ni., | 6433.00 |
| HSN-01 | Sree Vigneshwara Vividoddesha Souharda Sahakari Ni., | 2001.00 |
| BGM-306 | Swamy Vivekananda Credit Sahakari Ni., | 1000.00 |
| BGM-100 | Shivaji Credit Souharda Sahakari Ni., | 15000.00 |
| UDP-07 | Udupi Mudrakara Souharda Sahakari Ni., | 2000.00 |
| CKM-02 | Datri Vividoddesha Souharda Sahakari Ni., | 1000.00 |
| UDP-15 | Sri Sankammathai Credit Souharda Sahakari Ltd., | 1000.00 |
| CTG-02 | The Merchants Souharda Sahakara Bank Ni., | 100000.00 |
| BGU-56 | Sree Kanva Souharda Co-operative Credit Ni., | 5000.00 |
| TMK-33 | Sree Ganga Souharda Pattina Sahakari Ni., | 1000.00 |
| BEL-57 | Shubodaya Vividoddesha Souharda Sahakari Ni., | 6600.00 |
| BGM-340 | Sree Basaweshwara Credit Sahakari Ni., | 1000.00 |
| MYS-03 | Sharada Souharda Sahakari Ni., | 5001.00 |
| DWD-13 | Davajna Pattina Souharda Sahakari Ni., | 10000.00 |
| BDR-01 | Kalyana Pattina Souharda Sahakari Ni., | 10000.00 |
| BGU-67 | Kannada Credit Souharda Co-operative Ltd., | 2001.00 |
| SMG-13 | Shimoga Zilla Kendra Grahakara souharda Sahakari Ni., | 10000.00 |
| UDP-14 | Savitha Samaja Vividoddesha Souharda Sahakari Ni | 2000.00 |
| BGM-188 | Shri Lakshmi Credit Souharda Sahakari Ltd., | 2500.00 |

## ನೆರೆ ಪರಿಹಾರ ನಿಧಿಗೆ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ನೀಡಿರುವ ವಂತಿಗೆ ವಿವರಗಳು

| | | |
|---|---|---|
| MNG-09 | Mahila Nidhi Souharda Sahakari Ni., | 10000.00 |
| BGM-196 | Sri Bhagyalakshmi Urban Credit Souharda sahakari Ni., | 500.00 |
| BGK-06 | Ratnakara Souharda Co-operative Ltd. | 1000.00 |
| HVR-17 | Sree Vigneshwara Souharda Pattina sahakari Ni., | 1000.00 |
| BGK-28 | Yashswi Mahila Urban Co-operative Ltd., | 10000.00 |
| BEL-06 | Gayathri pattina Souharda Sahakari Ni., | 1001.00 |
| BGM-269 | Sree Basaweshwara Vividoddesha Souharda Sahakari ni., | 525.00 |
| MYS-11 | Sree Saraswathi Souharda Sahakari Ni., | 5000.00 |
| UDP-10 | Sree Bahubali Credit souharda Sahakari Ltd., | 500.00 |
| KWR-27 | Sangam Vividoddeshagala Souharda Sahakari Ni | 1000.00 |
| BJP-61 | Sree Sangamanatha Pattina Souharda Sahakari Ni., | 1000.00 |
| BGM-62 | Sree Bhagyajoythi Urban Credit Souharda Sahakari Ni., | 5001.00 |
| DWD-21 | Millath Credit Souharda Sahakari Ni., | 2000.00 |
| BGM-167 | Sree Mahalakshmi Urban Credit Souharda Sahakari Ni., | 1000.00 |
| BGM-113 | Akkamahadevi Majila Pattina Souharda Sahakari Ni., | 5000.00 |
| BDR-14 | Pandith Deen Dayal Upadhayaya Pattina souharda Sahakari Ni., | 5111.00 |
| GLB-02 | Laksmi Vikasa Pattina souharda Sahakari Ni., | 10000.00 |
| TMK-57 | Sree Patanjali Souharda Pattina Sahakari Ni., | 1000.00 |
| BGK-50 | Kamadhenu Credit Souharda Sahakari Ni., | 2500.00 |
| SMG-17 | Udaya Pattina Souharda Sahakari Ni., | 501.00 |
| SMG-01 | Krishik Souharda Sahakari Niyamita | 5000.00 |
| BGM-302 | Sri Mahalaxmi Vividoddesha Souharda Sahakari Ni. | 251.00 |
| GLB17 | Siddivinayaka Souharda Shakari Ni. | 11000.00 |
| TMK-01 | Kempegowda Pattana Souharda Sahakari Bank Ni. | 10000.00 |
| BGM-242 | Auto Riders Credit Souharda Sahakari Ni. | 500.00 |
| BJP-66 | Sri Kedareshwar Vividoddeshagala Souharda Sahakari Ni | 1100.00 |
| SMG-02 | Saraswat Souharda Pattina Sahakari Ni. | 5005.00 |
| KWR-48 | Adarsha Credit Souharda Sahakari Ni. | 2000.00 |
| MYS-15 | Sree Buwaneshwari Souharda Pattina Sahakari Ni., | 1100.00 |
| BGM-259 | Hindustan Latex Employees Multipurpose Souharda Sahakari Ni., | 2000.00 |
| | Karnataka State Souharda Federal Co-operative Ltd., | 500000.00 |
| MNG-08 | Ashwini Credit Souharda Sahakari NI., | 5000.00 |
| MNG-12 | Vidya Sangada Noukarara Souharda Sahakari Ni., | 1000.00 |
| BGM-178 | Sree Basaweshwara Credit Souharda Sahakari Ni., | 5000.00 |
| BGM-355 | Sree Veerashaiva Credit Souharda Sahakari Ni., | 5000.00 |
| BGU-21 | Sree Charan Souharda Co-operative Bank Ltd., | 200000.00 |
| MDK-02 | Kodagu Souharda Credit co-operative Ltd., | 1000.00 |
| BEL-03 | Sandur Pattana Souharda Sahakara Bank Ni., | 100000.00 |
| KWR-30 | Sahana vividoddeshagla Souharda sahakari Ni., | 3000.00 |
| BGM-104 | Shanthisagar Souharda Co-op Credit Society Ltd., | 5000.00 |
| BGU-26 | Sree Vasista Credit Souharda Sahakari Ltd., | 10000.00 |


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ**
**ವೆರ್ನ ಕಾರು ನಂ ಕೆ.ಎ.01ಎಮ್.ಬಿ.9923 ಮಾಡೆಲ್ ನಂ. 2006**

**ಮಾರಾಟಕ್ಕಿದೆ**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹೂಂಡೈ ವೆರ್ನ ಕಾರು ನಂ ಕೆ.ಎ.01ಎಮ್.ಬಿ.9923 ಮಾಡೆಲ್ ನಂ 2006

ಉತ್ತಮ ಸ್ಥಿತಿಯಲ್ಲಿರುವ ಬಿಳಿಕಾರು ಮಾರಾಟಕ್ಕಿದೆ. ಸಧ್ಯದ ಅಧಿಕೃತ ಮೌಲ್ಯಮಾಪನದ ಪ್ರಕಾರ ಅದರ ಬೆಲೆ ರೂ 4.25 ಲಕ್ಷರೂಗಳಾಗಿರುತ್ತದೆ. ಸದರಿ ಬೆಲೆ ಅಥವಾ ಅದಕ್ಕಿಂತ ಹೆಚ್ಚಿಗೆ ಬೆಲೆಯಲ್ಲಿ ಖರೀದಿಸಲು ಅಪೇಕ್ಷಿಸುವವರು ತಮ್ಮ ದರವನ್ನು ಸಂಯುಕ್ತ ಸಹಕಾರಿಗೆ ದಿನಾಂಕ 19–8–2010 ಮಧ್ಯಾಹ್ನ 3–00 ಘಂಟೆಯ ಒಳಗೆ ಸಂಯುಕ್ತ ಸಹಕಾರಿಗೆ ಸಲ್ಲಿಸಬಹುದು. ಕಾರು ಮಾರಾಟಕ್ಕೆ ಸಂಬಂದಿಸಿದಂತೆ ಅಚಿತಿಮ ನಿರ್ಣಯ ಸಂಯುಕ್ತ ಸಹಕಾರಿಯದ್ದಾಗಿರುತ್ತದೆ. ಕಾರು ಖರೀದಿಸುವವರು ಕಚೇರಿ ಅವಧಿಯಲ್ಲಿ ಕಾರು ವೀಕ್ಷಿಸಬಹುದಾಗಿದೆ.

– ವ್ಯವಸ್ಥಾಪಕರು.


### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at Wilson Garden Post Office 560027, Posting Day 8th
Reg. No. RNP/BGS/2094/2008-10 Licence to post
RNI Ref: KARBILO1214/10/1/2002-TC

## ಯುವ ಸಹಕಾರಿಗಳ ಪರಿಚಯ

# ಸಹಕಾರಿ ಕ್ಷೇತ್ರದ ಮೂಲಕ ಅಭಿವೃದ್ಧಿಯತ್ತ

ಹೈದರಾಬಾದ ಕರ್ನಾಟಕ ಪ್ರದೇಶ ಕರ್ನಾಟಕದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಅಸಮಾನತೆಯನ್ನು ಹೊಂದಿರುವ ಪ್ರದೇಶವಾದರೂ ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯಲ್ಲಿ ಹಲವರು ಸಮಾಜದ ಅಭಿವೃದ್ಧಿಯ ಚಿಂತಕರು ಇದ್ದಾರೆ. ಸಮಾಜದ ಅಭಿವೃದ್ಧಿಗಾಗಿ ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿ ಜನರಿಗೆ ಶೈಕ್ಷಣಿಕ,ಆರ್ಥಿಕ ಹಾಗೂ ಸಾಮಾಜಿಕ ರಾಜಕೀಯ ಬೆಳವಣಿಗೆಗೆ ಪೂರಕವಾಗುವ ಕಾರ್ಯಗಳನ್ನು ಮಾಡುವುದರ ಜೊತೆಗೆ ಜನರನ್ನು ಸಹಕಾರ ಕ್ಷೇತ್ರದ ಮೂಲಕವೂ ಅಭಿವೃದ್ಧಯತ್ತ ಕೊಂಡೊಯ್ಯುತ್ತಿದ್ದಾರೆ. ಅವರಲ್ಲಿ ಗುಲ್ಬರ್ಗಾದ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷ ಯುವ ಸಹಕಾರಿ ಶ್ರೀ ಸಂಜೀವ ಸಂಗಪ್ಪ ಮಹಾಜನರವರು ಒಬ್ಬರಾಗಿದ್ದಾರೆ.



ಶ್ರೀಯುತರು ದಿನಾಂಕ 24-11-1965ರಲ್ಲಿ ಮಹಾರಾಷ್ಟ್ರದ ಸೋಲಾಪುರದಲ್ಲಿ ಜನನ.ತಂದೆ ನಿವೃತ್ತ ಸರಕಾರಿ ಅಧಿಕಾರಿ ಡಾ ಸಂಗಪ್ಪ ಮಹಾಜನರವರು. ಪ್ರೈಮರಿ ಹಾಗೂ ಪ್ರೌಢ ಶಿಕ್ಷಣವನ್ನು ಗುಲ್ಬರ್ಗಾದ ನೂತನ ವಿದ್ಯಾಲಯದಲ್ಲಿ ಮುಗಿಸಿದ ಬಳಿಕ ಕಾಲೇಜ್ ವಿದ್ಯಾಭ್ಯಾಸವನ್ನು ಎಸ್.ಬಿ.ಕಾಲೇಜಿನಲ್ಲಿ ಮಾಡಿದರು.ಇಂಜಿನಿಯರಿಂಗ ಶಿಕ್ಷಣ ವರೆಗೆ ಓದಿದ ಶ್ರೀಯುತರು ಪ್ರಮುಖ ಕಂಪನಿಗಳ ಆಟೋಮೋಬೈಲ ಭಾಗಗಳ ಬಿಡಿಭಾಗಗಳ ವ್ಯಾಪಾರವನ್ನು ಪ್ರಾರಂಭಿಸಿದರು. ವ್ಯಾಪಾರದಲ್ಲಿ ಹೆಚ್ಚಿನ ಆಸಕ್ತಿ ಇದ್ದುದರಿಂದ ಹೆಚ್ಚಿನ ಶ್ರೇಯಸ್ಸು ಪಾಲಕರ ಸ್ನೇಹಿತರ ಪ್ರೋತ್ಸಾಹದಿಂದ ಸಂಗಮ ಎಜನ್ಸಿಜ ಪ್ರಾರಂಭಿಸಿದರು.ಯಶಸ್ಸು ಕಂಡರು. ಗುಲ್ಬರ್ಗಾದಲ್ಲಿ ಪ್ರಮುಖ ಉದ್ಯಮಿಯಾಗಿ ಗುರುತಿಸಿಕೊಂಡರು.

ಕೇವಲ ಸ್ವಂತಕ್ಕೆ ಉದ್ಯೋಗಮಾಡಿ ಹಣಸಂಪಾದನೆಮಾಡಿ ಜೀವನ ಸಾಗಿಸಿದರೆನು ಪ್ರಯೋಜನ ? ಸಮಾಜಕ್ಕೂ ಸಾಧ್ಯವಾದಷ್ಟು ಸೇವೆಸಲ್ಲಿಸಬೇಕು ಎಂಬುದು ಇವರ ಅಭಿಪ್ರಾಯ.ಸಹಕಾರಿ ಕ್ಷೇತ್ರದ ಮೂಲಕ ಸಾಧಿಸಿದ್ದು ಸಾಕಷ್ಟಿದೆ ಆದರೂ ಸಾಧಿಸಬೇಕಾದುದು ಸಾಕಷ್ಟಿದೆ. ಸಾರ್ವಜನಿಕರಿಗೆ ಸೇವೆ ಸಲ್ಲಿಸುವ ಉತ್ತಮ ಅವಕಾಶಗಳಿವೆ ಎಂದು ಅಭಿಪ್ರಾಯ ಪಡುವ ಶ್ರೀಯುತರು ಸಹಕಾರಿ ಕ್ಷೇತ್ರವನ್ನೆ ಆಯ್ಕೆ ಮಾಡಿಕೊಂಡರು. ಗುಲ್ಬರ್ಗಾದಲ್ಲಿ 26-7-2006ರರಲ್ಲಿ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯನ್ನು ಸ್ಥಾಪಿಸಿದರು. ಅಂದಿನಿಂದ ನಿರಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಯುವಕ ಆಡಳಿತ ಮಂಡಳಿ. ದಕ್ಷ ನಿಷ್ಠಾವಂತ ಅಧಿಕಾರಿಗಳು ಉತ್ತಮ ಸದಸ್ಯರು ಇವರಿಂದ ಶ್ರೀಯುತರಿಗೆ ಈ ಸಹಕಾರಿಯನ್ನು ಇನ್ನೂ ಎತ್ತರಕ್ಕೆ ಬೆಳೆಸುವ ಶಕ್ತಿಯನ್ನು ತುಂಬಿದೆ.

**ಅನುಕರಣೀಯ ಸಹಕಾರ ಚಳುವಳಿ :** "ಭಾರತದ ಸಹಕಾರಿ ಕ್ಷೇತ್ರದ ಯಶಸ್ಸನ್ನು ಅಧ್ಯಯನ ಮಾಡಿದ ಯುನೈಟೆಡ್ ನೇಶನ್ ರವರು 2012ನ್ನು ಅಂತರ ರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸಲು ತೀಮಾನಿಸಿದ್ದಾರೆ".


## SHRI BASAVESHWAR URBAN CREDIT SOUHARAD SAHAKARI NIYAMIT SANKESHWAR

**Branches: Chikkodi, Ghataprabha, Nippani, S.Khoot Bgm, Maddi galli, M.M. Ext Bgm, City Br, Kacheri Road, Hukkeri, Mudlagi, Yamakanmardi**

### Our Souhard Sahakari Deposit Mission For 5 Crore From 16/06/2010 to 26/06/2010

| SL | BRANCH | AS ON | AS ON | AS ON | DIFF | AS ON |
|---|---|---|---|---|---|---|
| | | 3/31/2010 | 6/15/2010 | 6/26/2010 | AMT | 6/30/2010 |
| 1 | HEAD OFFICE | 72607222 | 75541679 | 91686599 | **16144920** | 91300192 |
| 2 | CHIKKODI | 36469674 | 37501307 | 40289890 | **2788583** | 41132508 |
| 3 | GHATAPRABHA | 42577666 | 49053575 | 50987235 | **1933660** | 51298128 |
| 4 | NIPPANI | 10241959 | 12872350 | 18946744 | **6074394** | 18890054 |
| 5 | SHANIVAR KOOT | 16939767 | 17282838 | 19836180 | **2553343** | 19495899 |
| 6 | MADDI GALLI | 29109865 | 30287689 | 33331058 | **3043369** | 33070645 |
| 7 | M. M. EXT BGM | 40321101 | 39360054 | 45104378 | **5744324** | 44631165 |
| 8 | CITY BR | 34236046 | 37594427 | 40377593 | **2783166** | 40565207 |
| 9 | KACHERI ROAD | 11756597 | 15203973 | 15908274 | **704301** | 15480555 |
| 10 | HUKKERI | 11638257 | 15530878 | 18475143 | **2944265** | 18229114 |
| 11 | MUDALAGI | 12215586 | 12407418 | 15590968 | **3183550** | 15266953 |
| 12 | YAMAKANMARDI | 13303758 | 15609414 | 17829556 | **2220142** | 17812910 |
| | TOTAL- | 331417498 | 358245602 | 408363618 | **50118017** | 407173330 |


ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು– 560 002
ಇವರಿಂದ ಪ್ರಕಟಿತ ಸಂಪಾದಕ, ಪ್ರಕಾಶಕ: ನಾರಾಯಣ ಹೆಗಡೆ, ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು ಸಂಚಿಕೆ ಸಿದ್ಧತೆ ವಿ.ಜೆ.ಕಾರಕೂನ